ಕರ್ನಾಟಕ ಸರ್ಕಾರ

# ಸಾರ್ವಜನಿಕ ಉದ್ದಿಮೆಗಳ ಇಲಾಖೆ

# 2021-22ನೇ ಸಾಲಿನ ವಾರ್ಷಿಕ ವರದಿ

# ಹಾಗೂ

# 2022-23ರ ನಿರ್ವಹಣಾ ಮುಂಗಡಪತ್ರ

**2ನೇ ಗೇಟ್, 7ನೇ ಮಹಡಿ, ಬಹುಮಹಡಿಗಳ ಕಟ್ಟಡ,**
**ಡಾ: ಅಂಬೇಡ್ಕರ್ ವೀಧಿ, ಬೆಂಗಳೂರು-560 001**

# ಸಾರ್ವಜನಿಕ ಉದ್ದಿಮೆಗಳ ಇಲಾಖೆ

## 2021-22ನೇ ಸಾಲಿನ ವಾರ್ಷಿಕ ವರದಿ

## ಹಾಗೂ

## 2022-23ರ ನಿರ್ವಹಣಾ ಮುಂಗಡಪತ್ರ

**2ನೇ ಗೇಟ್, 7ನೇ ಮಹಡಿ, ಬಹುಮಹಡಿಗಳ ಕಟ್ಟಡ,**
**ಡಾ: ಅಂಬೇಡ್ಕರ್ ವೀಧಿ, ಬೆಂಗಳೂರು-560 001**

# ಸಾರ್ವಜನಿಕ ಉದ್ದಿಮೆಗಳ ಇಲಾಖೆ

## 2021-22ನೇ ಸಾಲಿನ ವಾರ್ಷಿಕ ವರದಿ ಹಾಗೂ 2022-23ರ ನಿರ್ವಹಣಾ ಮುಂಗಡ ಪತ್ರ

## ವಿಷಯ ಸೂಚಿ


| ಕ್ರ.ಸಂ. | ವಿಷಯ | ಪುಟ ಸಂಖ್ಯೆ |
|---|---|---|
| 1 | ಸಾರ್ವಜನಿಕ ಉದ್ದಿಮೆಗಳ ಇಲಾಖೆಯ ಪರಿಚಯ | 1-8 |
| 2 | ಸಾರ್ವಜನಿಕ ಉದ್ದಿಮೆಗಳ ಇಲಾಖೆಯ 2021-22ನೇ ಆಯವ್ಯಯ ಪಕ್ಷಿನೋಟ ಹಾಗೂ ವೆಚ್ಚಗಳ ವಿವರ | 9-14 |
| 3 | 2022-23ರ ನಿರ್ವಹಣಾ ಮುಂಗಡ ಪತ್ರ, ಸಾರ್ವಜನಿಕ ಉದ್ದಿಮೆಗಳ ಇಲಾಖೆಯ 2022-23ನೇ ಸಾಲಿನ ಮುಂದುವರೆದ ಯೋಜನಾ ಕಾರ್ಯಕ್ರಮಗಳ ವಿವರ | 15-20 |

# ಸಾರ್ವಜನಿಕ ಉದ್ದಿಮೆಗಳ ಇಲಾಖೆ

## 2020-21ನೇ ಸಾಲಿನ ವಾರ್ಷಿಕ ವರದಿ ಹಾಗೂ 2021-22ರ ನಿರ್ವಹಣಾ ಮುಂಗಡ ಪತ್ರ

## ಇಲಾಖಾ ಮುಖ್ಯಸ್ಥರ ವಿವರ

| ಕ್ರ.ಸಂ. | ಹುದ್ದೆ | ಹೆಸರು | ಇಂದ | ವರೆಗೆ |
|---|---|---|---|---|
| 1 | ಸಾರ್ವಜನಿಕ ಉದ್ದಿಮೆಗಳ ಸಚಿವರು | ಶ್ರೀ ಜಗದೀಶ್ ಶೆಟ್ಟರ್ | 20-08-2019 | 13.08.2021 |
| 2 | | ಶ್ರೀ ಎನ್ . ನಾಗರಾಜು ಎಂ.ಟಿ.ಬಿ | 14.08.2021 | |
| 3 | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ | ಶ್ರೀ ಬಿ.ಹೆಚ್. ಅನಿಲ್ ಕುಮಾರ್, ಭಾ.ಆ.ಸೇ. | 02-11-2020 | 25-01-2022 |
| 4 | ಸರ್ಕಾರದ ಕಾರ್ಯದರ್ಶಿ | ಡಾ. ಶಮ್ಲಾ ಇಕ್ಬಾಲ್ | 25-01-2022 | |

## ಸಾರ್ವಜನಿಕ ಉದ್ದಿಮೆಗಳ ಇಲಾಖೆಯ ಸಂಘಟನಾ ನಕ್ಷೆ (ಸಚಿವಾಲಯದಲ್ಲಿ)

ಸಾರ್ವಜನಿಕ ಉದ್ದಿಮೆಗಳ ಸಚಿವರು

↓

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಸರ್ಕಾರದ ಪ್ರಧಾನ ಕಾರ್ಯದರ್ಶಿ/
ಸರ್ಕಾರದ ಕಾರ್ಯದರ್ಶಿ

↓

ಸರ್ಕಾರದ ಉಪ ಕಾರ್ಯದರ್ಶಿ

| | |
|---|---|
| ↓ | ↓ |
| ಸರ್ಕಾರದ ಅಧೀನ ಕಾರ್ಯದರ್ಶಿ | ಸರ್ಕಾರದ ಅಧೀನ ಕಾರ್ಯದರ್ಶಿ |
| (ತಾಂತ್ರಿಕ) | (ಆಡಳಿತ) |
| ↓ | ↓ |
| ಶಾಖಾಧಿಕಾರಿ(1) | ಶಾಖಾಧಿಕಾರಿ(2) ಮತ್ತು ಶಾಖಾಧಿಕಾರಿ(3) |

## ಸಾರ್ವಜನಿಕ ಉದ್ದಿಮೆಗಳ ಇಲಾಖೆಯ ಪರಿಚಯ

## 2021-22ನೇ ಸಾಲಿನ ವಾರ್ಷಿಕ ವರದಿ ಹಾಗೂ 2022-23ನೇ ಸಾಲಿನ ನಿರ್ವಹಣಾ ಮುಂಗಡ ಪತ್ರ

ಸಾರ್ವಜನಿಕ ವಲಯದ ಉದ್ದಿಮೆಗಳು ರಾಜ್ಯದ ಆರ್ಥಿಕ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತವೆ. ನಮ್ಮ ರಾಜ್ಯದ 60 ಸಾರ್ವಜನಿಕ ಉದ್ದಿಮೆಗಳು, ಉತ್ಪಾದನೆ, ಸಾರಿಗೆ, ಇಂದನ, ಕೃಷಿ, ಜಲಸಂಪನ್ಮೂಲ, ಸೇವೆ ಮತ್ತು ಸಮುದಾಯದ ಅಭಿವೃದ್ಧಿ ವಲಯಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು ಇವುಗಳು ಪ್ರಸ್ತುತ 23 ಆಡಳಿತ ಇಲಾಖೆಗಳ ಆಡಳಿತಾತ್ಮಕ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುತ್ತವೆ. ಸಾರ್ವಜನಿಕ ಉದ್ದಿಮೆಗಳ ಇಲಾಖೆಯ ಈ ಉದ್ದಿಮೆಗಳಿಗೆ ನೋಡಲ್ ಏಜೆನ್ಸಿಯಾಗಿದ್ದು, ಸರ್ಕಾರದ ನಿರ್ಧಾರಗಳನ್ನು ಈ ಎಲ್ಲಾ ಉದ್ದಿಮೆಗಳಿಗೆ ಅನ್ವಯವಾಗುವಂತೆ ಏಕರೂಪದ ಮಾರ್ಗಸೂಚಿಗಳನ್ನು/ ಸೂಚನೆಗಳನ್ನು/ಆದೇಶಗಳನ್ನು ಹೊರಡಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತದೆ.

ಸಾರ್ವಜನಿಕ ಉದ್ದಿಮೆಗಳ ಇಲಾಖೆಯು, ಉದ್ದಿಮೆಗಳ ಕಾರ್ಯಕ್ಷಮತೆ ಹಾಗೂ ದಕ್ಷತೆಯನ್ನು ಹೆಚ್ಚಿಸಿ, ಅಭಿವೃದ್ಧಿಯತ್ತ ಕೊಂಡೊಯ್ಯಲು ಹುಟ್ಟಿಕೊಂಡ ಒಂದು ಇಲಾಖೆಯಾಗಿದೆ. ಈ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಉದ್ದಿಮೆಗಳ ಉದ್ಯೋಗಿಗಳ ಕಾರ್ಯಕ್ಷಮತೆ ಹೆಚ್ಚಿಸಲು ನುರಿತ ತರಬೇತಿ ಸಂಸ್ಥೆಗಳ ಅತ್ಯುತ್ತಮ ಬೋಧನಾಂಗ ವಿಭಾಗದ ಮೂಲಕ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುತ್ತದೆ. ಈ ಉದ್ದಿಮೆಗಳ ಕ್ರಮಬದ್ಧ ಹಾಗೂ ವ್ಯವಸ್ಥಿತ ಮೌಲ್ಯನಿರ್ಧರಣೆ ಮತ್ತು ಕಾಲಕಾಲಕ್ಕೆ ಸಾರ್ವಜನಿಕ ಉದ್ದಿಮೆಗಳ ಆಯಕಟ್ಟಿನ ಕಾರ್ಯನೀತಿ ಮೌಲ್ಯನಿರ್ಧರಣೆಗಳನ್ನು(Strategic Policy Evaluation) ನಡೆಸುವುದು ಸಾರ್ವಜನಿಕ ಉದ್ದಿಮೆಗಳ ಇಲಾಖೆಯ ಮಹತ್ವದ ಜವಾಬ್ದಾರಿಯಾಗಿದೆ. ರಾಜ್ಯದ ಸಾರ್ವಜನಿಕ ಉದ್ದಿಮೆಗಳನ್ನು, ಖಾಸಗೀ ಉದ್ದಿಮೆಗಳೊಂದಿಗೆ ಸ್ಪರ್ಧಾತ್ಮಕವಾಗಿ ಮುನ್ನಡೆಸಲು ಹಾಗೂ ಪ್ರೋತ್ಸಾಹಿಸಲು ಮಾನ್ಯ ಮುಖ್ಯಮಂತ್ರಿಯವರ ವಾರ್ಷಿಕ ರತ್ನ ಪ್ರಶಸ್ತಿಯನ್ನು ಪ್ರತೀ ವರ್ಷ ಐದು ಸರ್ವಾಂಗೀಣ ಯಶಸ್ವೀ ಉದ್ದಿಮೆಗಳಿಗೆ ನೀಡಲಾಗುತ್ತದೆ.

ಸಾರ್ವಜನಿಕ ಉದ್ದಿಮೆಗಳ ಇಲಾಖೆಗೆ ಪ್ರಸ್ತುತ ಸರ್ಕಾರದ ಕಾರ್ಯದರ್ಶಿಯವರು ಮುಖ್ಯಸ್ಥರಾಗಿರುತ್ತಾರೆ.

### ಸಾರ್ವಜನಿಕ ಉದ್ದಿಮೆಗಳ ಇಲಾಖೆಯು ರಾಜ್ಯ ಸಾರ್ವಜನಿಕ ವಲಯದ ಉದ್ದಿಮೆಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ವಿಷಯಗಳ ನಿರ್ವಹಣೆ ಕರ್ತವ್ಯವನ್ನು ನಿರ್ವಹಿಸುತ್ತದೆ.

1. ಕರ್ನಾಟಕ ಸರ್ಕಾರದ (ವ್ಯವಹಾರ ಹಂಚಿಕೆ) ನಿಯಮಗಳು 1977ರ ಹಾಗೂ ಅದರ ತಿದ್ದುಪಡಿಗಳ ಅಡಿಯಲ್ಲಿನ ಅನುಸೂಚಿ IIಎ ಸೂಚಿಸಿರುವ ಎಲ್ಲಾ ವಿಷಯಗಳು.
2. ಕರ್ನಾಟಕ ಸರ್ಕಾರದ (ವ್ಯವಹಾರ ನಿರ್ವಹಣೆ) ನಿಯಮಗಳು 1977ರ ನಿಯಮ 72 ಬಿ ಪ್ರಕಾರ ಎಲ್ಲಾ ಆಡಳಿತ ಇಲಾಖೆಗಳು ಈ ಕೆಳಗೆ ನಮೂದಿಸಿರುವ ಯಾವುದೇ ಪ್ರಸ್ತಾವನೆಗಳ ಬಗ್ಗೆ ಸಚಿವ ಸಂಪುಟದ ಅನುಮೋದನೆ ಪಡೆಯುವ ಅಥವಾ ಅಂತಿಮ ತೀರ್ಮಾನ ತೆಗೆದುಕೊಳ್ಳುವ ಮುನ್ನ ಸಾರ್ವಜನಿಕ ಉದ್ದಿಮೆಗಳ ಇಲಾಖೆಯನ್ನು ಸಮಾಲೋಚಿಸುತ್ತವೆ.
   i) ಕರ್ನಾಟಕ ಸರ್ಕಾರದ ಪೂರ್ಣಸ್ವಾಮ್ಯದಲ್ಲಿ ಅಥವಾ ಅಂಶಿಕವಾಗಿ ಆರ್ಥಿಕ ನೆರವಿನಿಂದ ಅಥವಾ ಸಾರ್ವಜನಿಕ ವಲಯದಲ್ಲಿ ಹೊಸ ನಿಗಮ ಅಥವಾ ಕಂಪನಿಗಳ ಸೃಜನೆ.
   ii) ಕರ್ನಾಟಕ ಸರ್ಕಾರ ಅಥವಾ ಸಾರ್ವಜನಿಕ ಉದ್ದಿಮೆಯು, ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಹೂಡಿಕೆ ಮತ್ತು ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ರಾಜ್ಯ ಹಣಕಾಸು ನಿಗಮಗಳನ್ನು ಹೊರತುಪಡಿಸಿ, ಹೊಸ ಅಥವಾ ಈಗ

ಅಸ್ತಿತ್ವದಲ್ಲಿರುವ ನಿಗಮ ಅಥವಾ ಕಂಪನಿಗೆ ಷೇರು ಬಂಡವಾಳ ತೊಡಗಿಸುವುದರಲ್ಲಿನ ಸಹಭಾಗಿತ್ವದ ಪ್ರಸಂಗಗಳು.

iii) ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಹೂಡಿಕೆ ಮತ್ತು ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ರಾಜ್ಯ ಹಣಕಾಸು ನಿಗಮವು ಹೊಸ ಅಥವಾ ಈಗ ಅಸ್ತಿತ್ವದಲ್ಲಿರುವ ನಿಗಮ ಅಥವಾ ಕಂಪನಿಗಳಲ್ಲಿ ರೂ. 50 ಲಕ್ಷಕ್ಕೂ ಮೀರಿ ಬಂಡವಾಳ ಹೂಡುವ ಪ್ರಸಂಗಗಳು.

iv) ಸಾರ್ವಜನಿಕ ಉದ್ದಿಮೆಗಳ ಮುಚ್ಚುವಿಕೆ, ವಿಲೀನಗೊಳಿಸುವಿಕೆ ಅಥವಾ ವಿನ್ಯಾಸದಲ್ಲಿನ ಪುನರ್ ಸಂಘಟನೆಯಂಥ ಇತರೆ ಪ್ರಮುಖ ಯೋಜನೆಗಳ ಪ್ರಸಂಗಗಳು.

3. ರಾಜ್ಯ ಸ್ವಾಮ್ಯದ ಸಾರ್ವಜನಿಕ ನಿಗಮ, ಕಂಪನಿಗಳು, ಉದ್ದಿಮೆಗಳ ಮತ್ತು ಯೋಜನೆಗಳಲ್ಲಿ ಬಂಡವಾಳ ವೆಚ್ಚ ಅಂದಾಜುಗಳು ಶೇಕಡ 20ಕ್ಕೂ ಹೆಚ್ಚು ಅಥವಾ ರೂ. 25 ಲಕ್ಷಕ್ಕೂ ಕಡಿಮೆ (ಇದರಲ್ಲಿ ಯಾವುದು ಕಡಿಮೆಯೋ ಅದು) ಇದ್ದರೆ ಅಂತಹ ಕಡೆ ಬಂಡವಾಳ ವೆಚ್ಚ ಅಂದಾಜುಗಳನ್ನು ಹೆಚ್ಚಿಸುವ ಪ್ರಸಂಗಗಳು.

i) ಸಾರ್ವಜನಿಕ ಉದ್ದಿಮೆಗಳ ಇಲಾಖೆಯು ಸರ್ಕಾರದ ಒಂದು ಅಂಗವಾಗಿ ಕಾರ್ಯನಿರ್ವಹಿಸುತ್ತಾ, ಸಾರ್ವಜನಿಕ ಉದ್ದಿಮೆಗಳ ಸಮನ್ವಯ ಹಾಗೂ ಉಸ್ತುವಾರಿ ಪ್ರಾಧಿಕಾರವಾಗಿ ಕೆಲಸ ನಿರ್ವಹಿಸುತ್ತಾ, ಸಾರ್ವಜನಿಕ ಉದ್ದಿಮೆಗಳಿಗೆ ಮಾರ್ಗದರ್ಶಕವಾಗಿ ಕೆಲಸ ಮಾಡುವ ಉದ್ದೇಶದಿಂದ, ಸಾರ್ವಜನಿಕ ಉದ್ದಿಮೆಗಳ ಇಲಾಖೆಯ ಕಾರ್ಯದರ್ಶಿ ಅಥವಾ ಅವರಿಂದ ನಾಮನಿರ್ದೇಶಿಸಲ್ಪಟ್ಟಿದ್ದ ಉಪಕಾರ್ಯದರ್ಶಿ ದರ್ಜೆಗಿಂತ ಕಡಿಮೆ ದರ್ಜೆಯವರಲ್ಲದ ಅಧಿಕಾರಿಯು ಪ್ರತಿ ಸಾರ್ವಜನಿಕ ಉದ್ದಿಮೆಯ ನಿರ್ದೇಶಕರ ಮಂಡಳಿಗೆ ನಿರ್ದೇಶಕರಾಗಿ ನೇಮಿಸಲ್ಪಡುತ್ತಾರೆ. ಈ ಅಂಶಕ್ಕೆ ಉಪಬಂಧವೇನೆಂದರೆ ನಾಮನಿರ್ದೇಶಿಸಲ್ಪಟ್ಟ ಯಾವ ವ್ಯಕ್ತಿಯು (ನಿರ್ದಿಷ್ಟವಾಗಿ ಉಲ್ಲೇಖಿಸದಿದ್ದಲ್ಲಿ) 10 ಕಂಪನಿಗಳಿಗಿಂತ ಹೆಚ್ಚಿನ ನಿರ್ದೇಶಕರ ಮಂಡಳಿಯಲ್ಲಿ ಸದಸ್ಯರಾಗಿ ಇರತಕ್ಕದ್ದಲ್ಲ.

ii) ಸರ್ಕಾರದ ಅನುಮೋದನೆ ಪಡೆದು ಉದ್ದಿಮೆಗಳಲ್ಲಿ ಖಾಸಗೀಕರಣ, ಪುನರ್ರಚನೆ ಮತ್ತು ಬಂಡವಾಳ ಹಿಂತೆಗೆದುಕೊಳ್ಳುವ ಕುರಿತಂತೆ ಸಾಮಾನ್ಯ ನೀತಿಯ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸುವುದು.

iii) ಸರ್ಕಾರದ ಅನುಮೋದನೆ ಪಡೆದು ಸಾರ್ವಜನಿಕ ಉದ್ದಿಮೆಗಳಿಗೆ ಸಂಬಂಧಿಸಿದಂತೆ ಹಣಕಾಸು ನಿರ್ವಹಣೆ, ವೇತನ ಒಪ್ಪಂದ, ಮಾನವ ಸಂಪನ್ಮೂಲ ಅಭಿವೃದ್ಧಿ ಮುಂತಾದ ವಿಷಯಗಳಲ್ಲಿ ನೀತಿಯ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸುವುದು.

iv) ಉನ್ನತ ಮಟ್ಟದ ಸಮಿತಿಯ ಪಾತ್ರದ ಕಾರ್ಯನಿರ್ವಹಣೆ, ಟಾಸ್ಕ್‌ಫೋರ್ಸ್, ಎಂ.ಓ.ಯುಗಳ ಅನುಷ್ಠಾನ, ಎಲ್ಲಾ ಸಾರ್ವಜನಿಕ ಉದ್ದಿಮೆಗಳ ಉಸ್ತುವಾರಿಯನ್ನು ನೋಡಿಕೊಳ್ಳುವುದರ ಜೊತೆಗೆ ಸಾರ್ವಜನಿಕ ಉದ್ದಿಮೆಗಳು ಮತ್ತು ಸಾರ್ವಜನಿಕ ಉದ್ದಿಮೆಗಳ ಇಲಾಖೆಯ ನಡುವಿನ ಎಂ.ಓ.ಯುಗಳನ್ನು ಕಾರ್ಯರೂಪಕ್ಕೆ ತರುವುದು.

v) ಸಾರ್ವಜನಿಕ ಉದ್ದಿಮೆ ಮಂಡಳಿಗಳ ಸಭೆಗಳ ನಡವಳಿಕೆಗಳನ್ನು ಕ್ರಮವಾಗಿ ಪುನರಾವಲೋಕಿಸುವುದು ಮತ್ತು ಕಾರ್ಯಸಾಮರ್ಥ್ಯವನ್ನು ಮೌಲ್ಯಮಾಪನ ಮಾಡುವುದು.

vi) ಪ್ರತಿ ವರ್ಷ ಆಯ್ದ ಸಾರ್ವಜನಿಕ ಉದ್ದಿಮೆಗಳ ಬಗ್ಗೆ ಆಳವಾಗಿ ಅಧ್ಯಯನ ಮಾಡುವುದು.

vii) ಸಾರ್ವಜನಿಕ ಉದ್ದಿಮೆಗಳ: ಆಡಳಿತ ಇಲಾಖೆಗಳು, ಮತ್ತಿತರೆ ಶಾಸನ ಸಮಿತಿಗಳು, ಭಾರತೀಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಇಲಾಖೆ, ಭಾರತ ಸರ್ಕಾರದ ಇಲಾಖೆಗಳು ಮತ್ತು ಇತರೆ ರಾಜ್ಯಗಳ ಎಸ್.ಸಿ.ಓ.ಪಿ.ಇ., ಯಂತಹ ಮಂಡಳಿಗಳ ನಡುವೆ ಮಧ್ಯವಾಹಿ(ಇಂಟರ್ಫೇಸ್)ಯಾಗಿ ಕಾರ್ಯ ನಿರ್ವಹಿಸುವುದು.

viii) ಕೆಳಕಂಡ ವಿಷಯಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕ ಉದ್ದಿಮೆಗಳ ಇಲಾಖೆಯನ್ನು ಆಡಳಿತ ಇಲಾಖೆಗಳು ಸಮಾಲೋಚಿಸುತ್ತವೆ.

- ನಿರ್ದೇಶಕ ಮಂಡಳಿಯ ಸಭಾ ನಡವಳಿಗಳನ್ನು ಒದಗಿಸುವ ಬಗ್ಗೆ ಹಾಗೂ ಸಂಸ್ಥೆಯ ಜ್ಞಾಪನ ಪತ್ರ ಮತ್ತು ನಿಯಮಾವಳಿಗಳ ತಿದ್ದುಪಡಿ.
- ನಿರ್ದೇಶಕ ಮಂಡಳಿಯ ಸಂಯೋಜನೆ.
- ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಸಂಭಾವನೆ/ಗೌರವಧನ ಹಾಗೂ ವಿಶೇಷ ಸೌಲಭ್ಯಗಳನ್ನು ಪರಿಷ್ಕರಿಸುವ ಬಗ್ಗೆ
- ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸುವ ಮತ್ತು ಪುನರಾವಲೋಕಿಸುವ ಕುರಿತು ಮಾರ್ಗಸೂಚಿಗಳು
- ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡುವ ಬಗ್ಗೆ ತಿದ್ದುಪಡಿ
- ಹೊಸ ಹುದ್ದೆಗಳ ಸೃಜನೆ ಬಗ್ಗೆ ಅನುಮತಿ
- ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣ: ಬಂಡವಾಳ ಹಿಂತೆಗೆದುಕೊಳ್ಳುವುದು: ಪುನರ್ ಸಂಘಟನೆ:ಮರುವಸತಿ.
- ಬೋನಸ್: ಗ್ರಾಚ್ಯುಟಿಯ ವಿತರಣೆ
- ವೇತನ ಪರಿಷ್ಕರಣೆ
- ಕನಿಷ್ಟ ವೇತನ ರೂ. 4,700-00 ಕ್ಕಿಂತ ಹೆಚ್ಚಾಗಿರುವ ಹುದ್ದೆಗಳ ರಚನೆ(ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ 538 ಸಲಸೇ2007, ದಿನಾಂಕ; 13.03.2008ರನ್ವಯ).
- ಗುತ್ತಿಗೆ ಆಧಾರದ ಮೇಲಿನ ನೇಮಕಾತಿ.
- ಮಂಡಳಿಗಳ ನಿರ್ದೇಶಕರುಗಳ ಹಾಜರಿ ಶುಲ್ಕವನ್ನು (ಸಿಟ್ಟಿಂಗ್ ಫೀ) ನಿರ್ಧರಿಸುವುದು.
- ಉದ್ಯೋಗಿಗಳು, ಇತರ ಸಿಬ್ಬಂದಿಗಳು, ನಿರ್ದೇಶಕರುಗಳು, ಮುಖ್ಯಾಧಿಕಾರಿಗಳಿಗೆ ಸಂಬಂಧಿಸಿದ ಹೆಚ್ಚುವರಿ ಸಂಭಾವನೆ ಹಾಗೂ ಯಾವುದೇ ಹೊಸ ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ಸೂಚನೆಗಳನ್ನು ಹೊರಡಿಸುವುದು.
- ಸಾರ್ವಜನಿಕ ಉದ್ದಿಮೆಗಳ ಎಲ್ಲಾ ದರ್ಜೆಯ ಸಿಬ್ಬಂದಿಗಳ ವಿದೇಶ ಪ್ರವಾಸದ ಪ್ರಸ್ತಾವನೆಗಳು.

ix) ಸಾರ್ವಜನಿಕ ಉದ್ದಿಮೆಗಳಿಗೆ ಸಂಬಂಧಿಸಿದಂತೆ ಡಾಟಾ-ಬ್ಯಾಂಕ್‌ನಂತೆ ಕೆಲಸ ನಿರ್ವಹಿಸಿ ಕಾರ್ಯನಿರ್ವಾಹಕ ಅಧಿಕಾರಿಗಳ ಹುದ್ದೆಗಳಿಗೆ ಅಭ್ಯರ್ಥಿಗಳ ಪಟ್ಟಿ ತಯಾರಿಸುವುದು ಮತ್ತು ಸಾರ್ವಜನಿಕ ಉದ್ದಿಮೆಗಳ ಆಯ್ಕೆ ಮಂಡಳಿಗೆ ಬೇಕಾದ

ಕಾರ್ಯ ನಿರ್ವಾಹಕ ಹುದ್ದೆಗಳ ಬಗ್ಗೆ ಎಲ್ಲಾ ಸಾರ್ವಜನಿಕ ಉದ್ದಿಮೆಗಳಿಗೆ ಸೂಚಿಸುವುದು.

x) ಸಾರ್ವಜನಿಕ ಉದ್ದಿಮೆಗಳ ಕಾರ್ಯಗಳಿಗೆ ಸಂಬಂಧಿಸಿದಂತೆ ವಾರ್ಷಿಕ ಸಮೀಕ್ಷಾ ವರದಿಗಳನ್ನು ತಯಾರಿಸಿ ರಾಜ್ಯ ವಿಧಾನ ಸಭೆಯಲ್ಲಿ ಮಂಡಿಸುವುದು.

xi) ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಮತ್ತು ಯೋಜನಾ ಇಲಾಖೆಗಳು ಸರ್ಕಾರದ ಎಲ್ಲಾ ಇಲಾಖೆಗಳಿಗೆ ನಿರ್ವಹಿಸುವ ಪಾತ್ರದಂತೆ, ಸಾರ್ವಜನಿಕ ಉದ್ದಿಮೆಗಳಿಗೆ ಸಚಿವಾಲಯವಾಗಿ ಕಾರ್ಯನಿರ್ವಹಿಸುತ್ತದೆ.

XII) ಸಾರ್ವಜನಿಕ ಉದ್ದಿಮೆಗಳ ಸಿಬ್ಬಂದಿಗಳಿಗೆ ನಿರಂತರವಾಗಿ ತರಬೇತಿ ಕೋರ್ಸ್‌ನ್ನು ನಡೆಸುವುದು.

XIII) ಸರ್ಕಾರವು ಆಗಿಂದಾಗ್ಗೆ ವಹಿಸುವ ಇತರೆ ಕರ್ತವ್ಯಗಳನ್ನು ನಿರ್ವಹಿಸುವುದು.

4. ಸಾರ್ವಜನಿಕ ಉದ್ದಿಮೆಗಳ ತಮ್ಮ ಪ್ರಸ್ತಾವನೆಗಳನ್ನು ಸಂಬಂಧಿಸಿದ ಆಡಳಿತ ಇಲಾಖೆಗಳ ಮೂಲಕವೇ ಸಾರ್ವಜನಿಕ ಉದ್ದಿಮೆಗಳ ಇಲಾಖೆಗೆ ಕಳುಹಿಸಬೇಕು. ಆನಂತರ ಆಡಳಿತ ಇಲಾಖೆಗಳು ಪ್ರಸ್ತಾವನೆಗಳನ್ನು ಸಂಬಂಧಿಸಿದ ಇಲಾಖೆಯ ಕಾರ್ಯದರ್ಶಿಯವರ ಅನುಮೋದನೆಯೊಂದಿಗೆ ತಮ್ಮ ಸಲಹೆ ಮತ್ತು ಅಭಿಪ್ರಾಯಗಳೊಂದಿಗೆ ಕರ್ನಾಟಕ ರಾಜ್ಯ ಉದ್ದಿಮೆಗಳ ಮಹೋದ್ಯಮಕ್ಕೆ ಕಳುಹಿಸತಕ್ಕದ್ದು.

5. ಕರ್ನಾಟಕ ಸರ್ಕಾರದ (ವ್ಯವಹಾರ ಹಂಚಿಕೆ) ನಿಯಮಗಳು, 1977 ರ ಅನುಸೂಚಿ –IIರ ಹಾಗೂ ಕರ್ನಾಟಕ ಸರ್ಕಾರದ (ವ್ಯವಹಾರ ನಿರ್ವಹಣೆ) ನಿಯಮಗಳು, 1977ರ ನಿಯಮ 72 ಬಿ, ಮೊದಲ ಅನುಸೂಚಿಯ ಕ್ರಮಸಂಖ್ಯೆ 16 ರಲ್ಲಿ ಮತ್ತು ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 538 ಸಅಸೇ 2007, ದಿನಾಂಕ 13.03.2008 ರಲ್ಲಿ ಸಾರ್ವಜನಿಕ ಉದ್ದಿಮೆಗಳಿಗೆ ಸಂಬಂಧಿಸಿದಂತೆ, ಆಡಳಿತ ಇಲಾಖೆಗಳು ಸಾರ್ವಜನಿಕ ಉದ್ದಿಮೆಗಳ ಇಲಾಖೆಯನ್ನು ಸಮಾಲೋಚಿಸುವ ಕುರಿತ ವಿಷಯಗಳನ್ನು ನಿರ್ದಿಷ್ಟಪಡಿಸಲಾಗಿದೆ.

6. ಸಾರ್ವಜನಿಕ ಉದ್ದಿಮೆಗಳ ಇಲಾಖೆಗೆ ಆಧ್ಯಾದೇಶವಾದ ಜವಾಬ್ದಾರಿಗಳಲ್ಲಿ (Mandated Responsibilities) ಕಂಪನಿ/ನಿಗಮಗಳ ವೃಂದ ಮತ್ತು ನೇಮಕಾತಿ ನಿಯಮಗಳು, ಸರ್ಕಾರಕ್ಕೆ ಲಾಭಾಂಶವನ್ನು (ಡಿವಿಡೆಂಡ್) ಪಾವತಿಸುವ ಬಗ್ಗೆ, ನಿರ್ದೇಶಕರ ಮಂಡಳಿಯ ಸಭಾ ನಡವಳಿಗಳನ್ನು ಕಳುಹಿಸಿಕೊಡುವ ಬಗ್ಗೆ, ಉದ್ದಿಮೆಗಳ ನಿಯಮಾವಳಿಗಳ ತಿದ್ದುಪಡಿ (ಮೆಮೊರಂಡಮ್ ಆಫ್ ಅಸೋಷಿಯೇಷನ್ ಮತ್ತು ಆರ್ಟಿಕಲ್ಸ್ ಆಫ್ ಅಸೋಸಿಯೇಷನ್), ನಿರ್ದೇಶಕರ ಮಂಡಳಿಯ ಸಂಯೋಜನೆ, ಬೋನಸ್/ಅನುಗ್ರಹಪೂರ್ವಕ ಕೊಡುಗೆ(Exgratia), ವೇತನ ಪರಿಷ್ಕರಣೆ, ಗುತ್ತಿಗೆ ಆಧಾರದ ನೇಮಕಾತಿ ಇತ್ಯಾದಿ ವಿಷಯಗಳ ಬಗ್ಗೆ ಕಡ್ಡಾಯವಾಗಿ ಸಾರ್ವಜನಿಕ ಉದ್ದಿಮೆಗಳ ಇಲಾಖೆಯನ್ನು ಆಡಳಿತ ಇಲಾಖೆಗಳು ಸಮಾಲೋಚಿಸುತ್ತವೆ.

7. ಕರ್ನಾಟಕ ಸರ್ಕಾರದ ಎಲ್ಲಾ ಸಾರ್ವಜನಿಕ ವಲಯ ಉದ್ಯಮಗಳು ಸಮರ್ಪಕ ಮತ್ತು ಸಮಗ್ರ ಸ್ವರೂಪದ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಬೇಕಾದ ಅಗತ್ಯವಿರುತ್ತದೆ. ಎಲ್ಲಾ ಸಾರ್ವಜನಿಕ ವಲಯ ಉದ್ಯಮಗಳು ತಮ್ಮ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಿಕೊಳ್ಳುವ ಅಥವಾ ಅವುಗಳನ್ನು ಸಮಕಾಲೀಕಗೊಳಿಸಿಕೊಳ್ಳುವ ವಿಷಯದಲ್ಲಿ ಸೂಕ್ತ ಮಾರ್ಗದರ್ಶನ ದೊರೆಯುವುದನ್ನು ಖಚಿತಪಡಿಸುವುದಕ್ಕಾಗಿ ದಿನಾಂಕ 24.10.2016 ರ ಸರ್ಕಾರಿ ಆದೇಶ ಸಂಖ್ಯೆ: ಡಿಪಿಇ 26 ಎಆರ್‌ಯು 2016 ಅನ್ನು ಹೊರಡಿಸಲಾಗಿದೆ. ಎಲ್ಲಾ ಸಾರ್ವಜನಿಕ ವಲಯ ಉದ್ಯಮಗಳು ತಮ್ಮ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಿಕೊಳ್ಳುವ ಅಥವಾ ಸಮಕಾಲೀನಗೊಳಿಸಿಕೊಳ್ಳುವ ವಿಷಯದಲ್ಲಿ ಸ್ಥೂಲ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಅನುಸರಿಸುವಂತೆ ನಿರ್ದೇಶನ ನೀಡಲಾಗಿದೆ.

# ಇಲಾಖೆಯ ಪ್ರಗತಿಯ ಪಕ್ಷಿನೋಟ

ಸಾರ್ವಜನಿಕ ಉದ್ದಿಮೆಗಳ ಇಲಾಖೆಯ ಮುಂದುವರೆದ ಯೋಜನೆಯಡಿ ಈ ಕೆಳಕಂಡ ಯೋಜನೆಗಳನ್ನು 2021-22ನೇ ಸಾಲಿನಲ್ಲಿ ಮುಂದುವರಿಸಲಾಗುತ್ತಿದೆ:

**ಸಾರ್ವಜನಿಕ ಉದ್ದಿಮೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರಿಗೆ ತರಬೇತಿ ಕಾರ್ಯಕ್ರಮ:**

ಸಾರ್ವಜನಿಕ ಉದ್ದಿಮೆಗಳ ಇಲಾಖೆಗೆ 2021-22ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ "3451-00-091-0-02-059(ಪೂರಕ ವೆಚ್ಚಗಳು) ಅಡಿಯಲ್ಲಿ ರೂ.100 ಲಕ್ಷಗಳನ್ನು ಇಲಾಖೆಯ ಕಾರ್ಯವ್ಯಾಪ್ತಿಯಡಿ ಬರುವ ವಿವಿಧ ಸಾರ್ವಜನಿಕ ಉದ್ದಿಮೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರ ವರ್ಗದವರಿಗೆ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲು ನಿಗದಿಪಡಿಸಲಾಗಿದೆ. ತಾಂತ್ರಿಕ, ಆಡಳಿತಾತ್ಮಕ, ಆರ್ಥಿಕ ಹಾಗೂ ಮಾನವ ಸಂಪನ್ಮೂಲ ವಿಷಯಗಳಲ್ಲಿ ಉತ್ತಮದಿಂದ ಅತ್ಯುತ್ತಮದೆಡೆಗೆ ಪರಿಕಲ್ಪನೆಯಲ್ಲಿ ಪ್ರಗತಿ ಸಾಧಿಸಲು ಕಾಲಕಾಲಕ್ಕೆ ಇಲಾಖೆ ವತಿಯಿಂದ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಪ್ರಸ್ತುತ ಸಾಲಿನಲ್ಲಿ 11 ಆನ್-ಲೈನ್ ತರಬೇತಿ ಕಾರ್ಯಕ್ರಮಗಳಲ್ಲಿ 390 ಅಧಿಕಾರಿ/ನೌಕರರಿಗೆ ಎಸ್.ಡಿ., ಎನ್.ಪಿ.ಸಿ., ಸಿಡಾಕ್, ಪಿಎಎಫ್, ಐಸಿಎಐಇ ಮುಂತಾದ ಸಂಸ್ಥೆಗಳ ಮೂಲಕ ಆಯೋಜಿಸಿ, ಅಂದಾಜು ಒಟ್ಟು ರೂ.24.00 ಲಕ್ಷಗಳ ವೆಚ್ಚದಲ್ಲಿ ತರಬೇತಿ ನೀಡಲಾಗಿದೆ.

**ಮಾನ್ಯ ಮುಖ್ಯಮಂತ್ರಿಯವರ ವಾರ್ಷಿಕ ರತ್ನ ಪ್ರಶಸ್ತಿ:**

ಸಾರ್ವಜನಿಕ ಉದ್ದಿಮೆಗಳ ಇಲಾಖೆಗೆ ಲೆಕ್ಕಶೀರ್ಷಿಕೆ "3451-00-091-0-02-059(ಇತರೆ ವೆಚ್ಚಗಳು) ಅಡಿಯಲ್ಲಿ 2021-22ನೇ ಸಾಲಿನ ಆಯವ್ಯಯದಲ್ಲಿ ರೂ.100 ಲಕ್ಷಗಳನ್ನು ಮಾನ್ಯ ಮುಖ್ಯಮಂತ್ರಿಯವರ ವಾರ್ಷಿಕ ರತ್ನ ಪ್ರಶಸ್ತಿಯನ್ನು ನೀಡಲು ನಿಗದಿಪಡಿಸಲಾಗಿದೆ. ಸಾರ್ವಜನಿಕ ಉದ್ದಿಮೆಗಳನ್ನು ಪ್ರೇರೇಪಿಸಲು, ಗುರುತಿಸಲು, ಪ್ರಶಂಸಿಸಲು ಮಾನ್ಯ ಮುಖ್ಯಮಂತ್ರಿಯವರ ವಾರ್ಷಿಕ ರತ್ನ ಪ್ರಶಸ್ತಿಯನ್ನು ಪ್ರತೀ ವರ್ಷದಂತೆ 2021-22ನೇ ಸಾಲಿನಲ್ಲಿ 05 ಸಾರ್ವಜನಿಕ ಉದ್ದಿಮೆಗಳಿಗೆ ನೀಡಲು ಆಯ್ಕೆ ಪ್ರಕ್ರಿಯೆಯಲ್ಲಿ ಅಂತಿಮವಾಗಿ ಉದ್ದೇಶಿಸಲಾಗಿದೆ. ಪ್ರಶಸ್ತಿಗೆ ಆಯ್ಕೆಯಾದ ಉದ್ದಿಮೆಗಳಿಗೆ ತಲಾ ರೂ.10.00 ಲಕ್ಷಗಳ ನಗದು ಬಹುಮಾನವನ್ನು ಅಂದಾಜು ರೂ.50.00 ಲಕ್ಷಗಳು ವೆಚ್ಚದಲ್ಲಿ ನೀಡಲಾಗುವುದು.

| ಕ್ರ.ಸಂ. | ಪ್ರಶಸ್ತಿಗೆ ಆಯ್ಕೆಯಾದ ಉದ್ದಿಮೆಗಳ ವಿವರ |
|---|---|
| 1 | ಕರ್ನಾಟಕ ಗ್ರಾಮೀಣ ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ |
| 2 | ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ |
| 3 | ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ |
| 4 | ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ |
| 5 | ದಿ ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಲಿಮಿಟೆಡ್ |

## ಸಾರ್ವಜನಿಕ ಉದ್ದಿಮೆಗಳ ಅಧ್ಯಯನ ಮತ್ತು ಮೌಲ್ಯಮಾಪನ

ಸಾರ್ವಜನಿಕ ಉದ್ದಿಮೆಗಳು ಬದಲಾಗುತ್ತಿರುವ ಆರ್ಥಿಕ ವಾತಾವರಣವನ್ನು ಎದುರಿಸಲು ಸನ್ನದ್ಧವಾಗಲು ಕೆಲವು ಸುಧಾರಣೆಗಳನ್ನು ತರಬೇಕಾಗುತ್ತದೆ. ಆದಕಾರಣ, ಸಾರ್ವಜನಿಕ ಉದ್ದಿಮೆಗಳು ಲಾಭದಾಯಕವಾಗಿ ಹಾಗೂ ಸ್ವಯಂ-ಸಮರ್ಥನೀಯವಾಗಿ ಕಾರ್ಯನಿರ್ವಹಿಸಲು ತಡೆಯುಂಟು ಮಾಡುತ್ತಿರುವ ಆಳವಾಗಿ ಬೇರೂರಿದ ಪರಿಕಲ್ಪನೆಗಳನ್ನು ಗುರುತಿಸಲು ರಾಜ್ಯ ಸರ್ಕಾರವು ಸಾರ್ವಜನಿಕ ಉದ್ದಿಮೆಗಳ ಕಾರ್ಯನಿರ್ವಹಣೆಯನ್ನು ಮೌಲ್ಯಮಾಪನ ಮಾಡಲು ಕ್ರಮ ಕೈಗೊಳ್ಳುತ್ತದೆ. 2019-20ನೇ ಸಾಲಿನಲ್ಲಿ 10 ಸಾರ್ವಜನಿಕ ಉದ್ದಿಮೆಗಳ ಮೌಲ್ಯಮಾಪನ ಕಾರ್ಯವನ್ನು ನಡೆಸಲು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರಕ್ಕೆ ವಹಿಸಲಾಗಿದ್ದು, ವರದಿಯನ್ನು ನಿರೀಕ್ಷಿಸಲಾಗುತ್ತಿರುವ ಕಾರಣ ಪ್ರಸಕ್ತ ಸಾಲಿನಲ್ಲಿ ಯಾವುದೇ ಮೌಲ್ಯಮಾಪನ ಕಾರ್ಯವನ್ನು ಕೈಗೊಂಡಿರುವುದಿಲ್ಲ.

# ಸಾರ್ವಜನಿಕ ಉದ್ದಿಮೆಗಳ ಇಲಾಖೆ

## ಸಾರ್ವಜನಿಕ ಉದ್ದಿಮೆಗಳ ಇಲಾಖೆಯ 2021-22ನೇ ಸಾಲಿನ ಆಯವ್ಯಯ ಪಕ್ಷಿನೋಟ

## ಸಾರ್ವಜನಿಕ ಉದ್ದಿಮೆಗಳ ಇಲಾಖೆಯ ಯೋಜನೆಗಳು ರಾಜ್ಯ ವಲಯದ ಯೋಜನೆಗಳು

1. **ಮಾನ್ಯ ಮುಖ್ಯಮಂತ್ರಿಯವರ ವಾರ್ಷಿಕ ರತ್ನ ಪ್ರಶಸ್ತಿ ಮತ್ತು ಮೌಲ್ಯಮಾಪನ**

| | | |
|---|---|---|
| ಅ | **ಯೋಜನೆಯ ಹೆಸರು**<br><br>**ಯೋಜನೆಯ ಹೆಸರು ಜಾರಿಗೊಳಿಸಿದ ವರ್ಷ** | ಮಾನ್ಯ ಮುಖ್ಯಮಂತ್ರಿಯವರ ವಾರ್ಷಿಕ ರತ್ನ ಪ್ರಶಸ್ತಿ ಮತ್ತು ಸಾರ್ವಜನಿಕ ಉದ್ದಿಮೆಗಳ ಮೌಲ್ಯಮಾಪನ<br>2021-22ನೇ ಸಾಲು |
| ಆ | **ಆಯವ್ಯಯ ಶೀರ್ಷಿಕೆ** | 3451-00-091-0-01-015(ಪೂರಕ ವೆಚ್ಚಗಳು) |
| ಇ | **ಆಯವ್ಯಯದಲ್ಲಿ ನಿಗದಿಯಾದ ಮೊತ್ತ** | 100.00ಲಕ್ಷಗಳು |
| ಈ | **ರಾಜ್ಯದ ಪಾಲು** | 100% |
| ಉ | **ಯೋಜನೆಯ ಉದ್ದೇಶ** | ಉತ್ತಮವಾಗಿ ಕಾರ್ಯನಿರ್ವಹಿಸುವ ಹಾಗೂ ಸತತ 3 ವರ್ಷಗಳಿಂದ ಲಾಭದಲ್ಲಿರುವ ಸಾರ್ವಜನಿಕ ಉದ್ದಿಮೆಗಳನ್ನು ಗುರುತಿಸಿ ಅವುಗಳ ಕಾರ್ಯಕ್ರಮತೆಯನ್ನು ಪ್ರೇರೇಸಲು ಹಾಗೂ ಪ್ರಶಂಸಿಸಲು ಮಾನ್ಯ ಮುಖ್ಯಮಂತ್ರಿಯವರ "ವಾರ್ಷಿಕ ರತ್ನ ಪ್ರಶಸ್ತಿ"ಯನ್ನು ನೀಡುವುದು.<br>ಸಾರ್ವಜನಿಕ ಉದ್ದಿಮೆಗಳ ಕಾರ್ಯದಕ್ಷತೆ ಹಾಗೂ ಪರಿಣಾಮಕಾರಿತ್ವವನ್ನು ಹೆಚ್ಚಿಸಲು ಮತ್ತು ಅವುಗಳ ಉತ್ಪಾದಕತೆಯನ್ನು ಅತ್ಯುತ್ತಮಗೊಳಿಸಲು ಅವುಗಳ ವ್ಯವಸ್ಥೆ ಹಾಗೂ ರಚನೆಯನ್ನು ವ್ಯವಸ್ಥಿತಗೊಳಿಸಲು ಹಾಗೂ ನಷ್ಟದಲ್ಲಿರುವ ಸಾರ್ವಜನಿಕ ಉದ್ದಿಮೆಯು ನಷ್ಟದಿಂದ ಹೊರಬರಲು ಹಾಗೂ ಲಾಭದಾಯಕದತ್ತ ಕಾರ್ಯನಿರ್ವಹಿಸಲು ಅನುಕೂಲವಾಗುವಂತೆ ನುರಿತ ಸಂಸ್ಥೆಗಳಿಂದ ಉದ್ದಿಮೆಗಳ ಮೌಲ್ಯಮಾಪನ ಹಾಗೂ ಅಧ್ಯಯನವನ್ನು ಕೈಗೊಳ್ಳುವುದು. |
| ಊ | **ಯೋಜನೆಯಡಿ ಅಂದಾಜು ಫಲಿತಾಂಶ ಮತ್ತು ಅಂದಾಜು ಫಲಾನುಭವಿಗಳು(ವರ್ಷಾಂತ್ಯದಲ್ಲಿ ಅಳತೆ ಮಾಡಬಹುದಾದ ಫಲಿತಾಂಶ)** | 2021-22ನೇ ಸಾಲಿನಲ್ಲಿ ಆಯ್ಕೆಯಾದ 5 ವಿಜೇತ ಕಂಪನಿಗಳಿಗೆ ತಲಾ 10.00 ಲಕ್ಷದಂತೆ ಮಾನ್ಯ ಮುಖ್ಯಂತ್ರಿಯವರ ವಾರ್ಷಿಕ ರತ್ನ ಪ್ರಶಸ್ತಿ ನೀಡಲಾಗುವುದು.<br>ಸದರಿ ಸಾಲಿನಲ್ಲಿ ಮೌಲ್ಯಮಾಪನ ಕಾರ್ಯಕೈಗೊಂಡಿರುವುದಿಲ್ಲ. |

ಋ. ಆರ್ಥಿಕ ಸಾಧನೆ(ವೆಚ್ಚ ರೂ ಲಕ್ಷಗಳಲ್ಲಿ)

| ಲೆಕ್ಕಶೀರ್ಷಿಕೆ 2021-22 | ಲೆಕ್ಕ 2020-21 | ಆಯವ್ಯಯ ಅಂದಾಜು 2021-22 | ಅಂದಾಜು ವೆಚ್ಚ |
|---|---|---|---|
| 3451-00-091-0-01-015 (ಪೂರಕ ವೆಚ್ಚಗಳು) | 50.00 | 100.00 | 50.00 |

ಎ. ಭೌತಿಕ ಸಾಧನೆ(ಘಟಕ ಸಂಖ್ಯೆಗಳಲ್ಲಿ)

| 2020-21 | | 2021-22 | | ಲೆಕ್ಕ ಪರಿಶೋಧನಾ ಕಂಡಿಕೆಗಳು |
|---|---|---|---|---|
| ಗುರಿ | ಸಾಧನೆ | ಗುರಿ | ಸಾಧನೆ | Nil |
| 5 | 5 | 5 | 5 | |

2. **ಸಾರ್ವಜನಿಕ ಉದ್ದಿಮೆಗಳ ಅಧಿಕಾರಿ/ನೌಕರರಿಗೆ ತರಬೇತಿ ಕಾರ್ಯಕ್ರಮಗಳು.**

| | | |
|---|---|---|
| **ಅ** | **ಯೋಜನೆಯ ಹೆಸರು:**<br><br>**ಜಾರಿಗೊಳಿಸಿದ ವರ್ಷ:** | ಸಾರ್ವಜನಿಕ ಉದ್ದಿಮೆಗಳ ಅಧಿಕಾರಿ/ನೌಕರ ವರ್ಗಗದವರಿಗೆ ತರಬೇತಿ ಕಾರ್ಯಕ್ರಮಗಳು<br><br>2021-22ನೇ ಸಾಲು |
| **ಆ** | **ಆಯವ್ಯಯ ಶೀರ್ಷಿಕೆ** | 3451-00-091-0-02-059(ಇತರೆ ವೆಚ್ಚಗಳು) |
| **ಇ** | **ಆಯವ್ಯಯದಲ್ಲಿ ನಿಗದಿಯಾದ ಮೊತ್ತ** | 100.00ಲಕ್ಷಗಳು |
| **ಈ** | **ರಾಜ್ಯದ ಪಾಲು** | 100% |
| **ಉ** | **ಯೋಜನೆಯ ಉದ್ದೇಶ** | ಸಾರ್ವಜನಿಕ ಉದ್ಯಮಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು/ ಸಿಬ್ಬಂದಿಗಳ ಬುದ್ದಿಶಕ್ತಿ ಮತ್ತು ಕೌಶಲ್ಯವನ್ನು ಅಭಿವೃದ್ಧಿಪಡಿಸಲು ಉತ್ಪಾದನಾ ಮಾರುಕಟ್ಟೆಯ ಕಾರ್ಯಕ್ಷಮತೆ, ವರಮಾನ, ಮಾನವ ಸಂಪನ್ಮೂಲ ನಿರ್ವಹಣೆ, ಕೈಗಾರಿಕಾ ನಿಯಂತ್ರಣ, ಪರಿಸರ ಮತ್ತು ಜೀವಿಶಾಸ್ತ್ರ ಮತ್ತು ಕೈಗಾರಿಕಾ ಸುರಕ್ಷತೆ ಇತ್ಯಾದಿ ವಿಷಯಗಳ ಬಗ್ಗೆ ನುರಿತ(ಗುರುತಿಸಲ್ಪಟ್ಟ) ಸಂಸ್ಥೆಗಳಿಂದ ಸಾರ್ವಜನಿಕ ಉದ್ದಿಮೆಗಳ ಇಲಾಖೆಯ ವತಿಯಿಂದ ತರಬೇತಿಗಳನ್ನು ನಡೆಸಲಾಗುವುದು. |
| **ಊ** | **ಯೋಜನೆಯಡಿ ಅಂದಾಜು ಫಲಿತಾಂಶ ಮತ್ತು ಅಂದಾಜು ಫಲಾನುಭವಿಗಳು(ವರ್ಷಾಂತ್ಯದಲ್ಲಿ ಅಳತೆ ಮಾಡಬಹುದಾದ ಫಲಿತಾಂಶ)** | 2021-22ನೇ ಸಾಲಿನಲ್ಲಿ ಸಾರ್ವಜನಿಕ ಉದ್ದಿಮೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳಿಗೆ ಒಟ್ಟು 11 ಆನ್ ಲೈನ್ ತರಬೇತಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. 390 ಅಧಿಕಾರಿ/ನೌಕರರಿಗೆ ತರಬೇತಿಯನ್ನು ನೀಡಲಾಗಿದೆ. |

ಋ. ಆರ್ಥಿಕ ಸಾಧನೆ(ವೆಚ್ಚ ರೂ ಲಕ್ಷಗಳಲ್ಲಿ)

| ಲೆಕ್ಕಶೀರ್ಷಿಕೆ 2021-22 | ಲೆಕ್ಕ 2020-21 | ಆಯವ್ಯಯ ಅಂದಾಜು 2021-22 | ಅಂದಾಜು ವೆಚ್ಚ |
|---|---|---|---|
| 3451-00-091-0-02-059 (ಪೂರಕ ವೆಚ್ಚಗಳು) | 50.00 | 100.00 | 24.00 |

ಎ. ಭೌತಿಕ ಸಾಧನೆ (ಘಟಕ ಸಂಖ್ಯೆಗಳಲ್ಲಿ)

| 2020-21 | | 2021-22 | | ಲೆಕ್ಕ ಪರಿಶೋಧನಾ ಕಂಡಿಕೆಗಳು |
|---|---|---|---|---|
| | | | | |
| ಗುರಿ | ಸಾಧನೆ | ಗುರಿ | ಸಾಧನೆ | Nil |
| 11 | 11 | 11 | 11 | |

## 2022-23ರ ಕಾರ್ಯನಿರ್ವಹಣಾ ಮುಂಗಡ ಪತ್ರದ ವರದಿ

## ಸಾರ್ವಜನಿಕ ಉದ್ದಿಮೆಗಳ ಇಲಾಖೆಯ 2022-23ನೇ ಸಾಲಿನ ಮುಂದುವರೆದ ಯೋಜನಾ ಕಾರ್ಯಕ್ರಮಗಳ ವಿವರ

| ಕ್ರ. ಸಂ | ಯೋಜನೆ, ಲೆಕ್ಕಶೀರ್ಷಿಕೆ ಮತ್ತು ಕಾಂಪೊನೆಂಟ್‌ಸ್‌ಗಳು | ಉದ್ದೇಶಗಳು | ಯೋಜನಾ ಕಾರ್ಯಕ್ರಮಗಳಿಗೆ ಪ್ರಸ್ತಾಪಿಸಿರು ಅನುದಾನದ ವಿವರ 2022-23ನೇ ಸಾಲಿಗೆ | |
|---|---|---|---|---|
| | | | **ಆರ್ಥಿಕ (ರೂ. ಲಕ್ಷಗಳಲ್ಲಿ)** | **ಭೌತಿಕ** |
| 1. | ಸಾರ್ವಜನಿಕ ಉದ್ದಿಮೆಗಳ ಇಲಾಖೆ **ಲೆಕ್ಕಶೀರ್ಷಿಕೆ:3451-00-091-0-01-015** ರಾಜ್ಯಮಟ್ಟದ ಸಾರ್ವಜನಿಕ ಉದ್ದಿಮೆಗಳ ಮೌಲ್ಯಮಾಪನ ಅಧ್ಯಯನ ಕಾರ್ಯಕ್ರಮ | ಉದ್ದಿಮೆಗಳ ಮೌಲ್ಯಮಾಪನ | 25.00 | ಸಾರ್ವಜನಿಕ ಉದ್ದಿಮೆಗಳ ಮೌಲ್ಯಮಾಪನಕ್ಕಾಗಿ ಆಯ್ಕೆಯಾದ ಸಾರ್ವಜನಿಕ ಉದ್ದಿಮೆಗಳು(ಘಟಕ ಸಂಖ್ಯೆಯಲ್ಲಿ) |
| | 2. ಸಾರ್ವಜನಿಕ ಉದ್ದಿಮೆಗಳಿಗೆ ಮಾನ್ಯ ಮುಖ್ಯಮಂತ್ರಿಗಳ ವಾರ್ಷಿಕ ರತ್ನ ಪ್ರಶಸ್ತಿಗಳು | ಪ್ರಶಸ್ತಿಗಳು | 50.00 | ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿದ ಸಾರ್ವಜನಿಕ ಉದ್ದಿಮೆಗಳಿಗೆ ರಾಜ್ಯಮಟ್ಟದ ಪ್ರಶಸ್ತಿ(ಘಟಕ ಸಂಖ್ಯೆಗಳಲ್ಲಿ) |
| | **ಒಟ್ಟು** | | **75.00** | |
| 2. | **ಬಂಡವಾಳ ಹಿಂತೆಗೆಯುವಿಕೆ ಮತ್ತು ರಾಜ್ಯ ಸಾರ್ವಜನಿಕ ಉದ್ದಿಮೆಗಳ ಸುಧಾರಣೆ ಲೆಕ್ಕ ಶೀರ್ಷಿಕೆ:3451-00-091-0-02-059** ಕರ್ನಾಟಕ ರಾಜ್ಯ ಸಾರ್ವಜನಿಕ ಉದ್ದಿಮೆಗಳ ಎಲ್ಲಾ ವರ್ಗದ ಅಧಿಕಾರಿ/ಸಿಬ್ಬಂದಿಗಳಿಗೆ ತರಬೇತಿ ಕಾರ್ಯಕ್ರಮಗಳು | ತರಬೇತಿ ಕಾರ್ಯಕ್ರಮಗಳು | 50.00 | ಸಾರ್ವಜನಿಕ ಉದ್ದಿಮೆಗಳ ಎಲ್ಲಾ ವರ್ಗದ ನೌಕರರು/ಅಧಿಕಾರಿಗಳಿಗೆ ತರಬೇತಿ ಕಾರ್ಯಕ್ರಮಗಳು(ಘಟಕ ಸಂಖ್ಯೆಗಳಲ್ಲಿ) |
| | **ಒಟ್ಟು** | | **50.00** | |
| | **ಒಟ್ಟಾರೆ ಮೊತ್ತ** | | **125.00** | |

**ಸಾರ್ವಜನಿಕ ಉದ್ದಿಮೆಗಳ ಇಲಾಖೆಯ ಮುಂದುವರೆದ ಯೋಜನೆಯಡಿ ಈ ಕೆಳಕಂಡ ಯೋಜನೆಗಳನ್ನು 2022-23ನೇ ಸಾಲಿನಲ್ಲಿ ಮುಂದುವರಿಸಲಾಗುತ್ತಿದೆ.**

**ಸಾರ್ವಜನಿಕ ಉದ್ದಿಮೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರಿಗೆ ತರಬೇತಿ ಕಾರ್ಯಕ್ರಮ**

ಸಾರ್ವಜನಿಕ ಉದ್ದಿಮೆಗಳಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿ ಹಾಗೂ ನೌಕರ ವರ್ಗದವರಿಗೆ ಕಾಲ ಕಾಲಕ್ಕೆ ತಾಂತ್ರಿಕ, ಆಡಳಿತಾತ್ಮಕ, ಆರ್ಥಿಕ, ಮಾನವ ಸಂಪನ್ಮೂಲ ವಿಷಯಗಳಲ್ಲಿ ಉತ್ತಮದಿಂದ ಅತ್ಯುತ್ತಮದೆಡೆಗೆ ಪರಿಕಲ್ಪನೆಯಲ್ಲಿ ಪ್ರಗತಿ ಸಾಧಿಸಲು ವಿವಿಧ ತರಬೇತಿ ಕಾರ್ಯಕ್ರಮಗಳನ್ನು ನಿಯೋಜಿಸಲಾಗುತ್ತದೆ. 2022-23ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲಾಗುವ ಅನುದಾನದಲ್ಲಿ, ಸಾರ್ವಜನಿಕ ಉದ್ದಿಮೆಗಳ ಅಧಿಕಾರಿ/ನೌಕರರಿಗೆ ಪರಿಸ್ಥಿತಿಯನ್ನಾಧರಿಸಿ, ನೇರ ತರಬೇತಿ/ಆನ್—ಲೈನ್ ತರಬೇತಿಗಳನ್ನು ಜರುಗಿಸಲಾಗುವುದು.

**ಮಾನ್ಯ ಮುಖ್ಯಮಂತ್ರಿಯವರ ವಾರ್ಷಿಕ ರತ್ನ ಪ್ರಶಸ್ತಿ:**

ಸಾರ್ವಜನಿಕ ಉದ್ದಿಮೆಗಳನ್ನು ಪ್ರೇರೇಪಿಸಲು, ಗುರುತಿಸಲು, ಪ್ರಶಂಸಿಸಲು ಆಯ್ದ ಸಾರ್ವಜನಿಕ ಉದ್ದಿಮೆಗಳಿಗೆ ಮಾನ್ಯ ಮುಖ್ಯಮಂತ್ರಿಯವರ ವಾರ್ಷಿಕ ರತ್ನ ಪ್ರಶಸ್ತಿಯನ್ನು ನೀಡಲಾಗುತ್ತಿದ್ದು, ಈ ಪ್ರಶಸ್ತಿಯು ನಗದು ಬಹುಮಾನ ಹಾಗೂ ಪ್ರಶಸ್ತಿ/ಪ್ರಮಾಣ ಪತ್ರವನ್ನು ಹೊಂದಿರುತ್ತದೆ. ಇದರಿಂದ ಉದ್ದಿಮೆಗಳು ಹೆಚ್ಚಿನ ಪ್ರಗತಿ ಸಾಧಿಸಲು ಪ್ರೋತ್ಸಾಹದಾಯಕವಾಗಿರುತ್ತದೆ. 2022-23ನೇ ಸಾಲಿನಲ್ಲಿ ಮಾನ್ಯ ಮುಖ್ಯಮಂತ್ರಿಯವರ ವಾರ್ಷಿಕ ರತ್ನ ಪ್ರಶಸ್ತಿಯನ್ನು ಸೂಕ್ತ ಸಾರ್ವಜನಿಕ ಉದ್ದಿಮೆಗಳನ್ನು ಗುರುತಿಸಿ ನೀಡಲಾಗುವುದು.

**ಸಾರ್ವಜನಿಕ ಉದ್ದಿಮೆಗಳ ಮೌಲ್ಯಮಾಪನ:**

ಸಾರ್ವಜನಿಕ ಉದ್ದಿಮೆಗಳ ಇಲಾಖೆಯು ರಾಜ್ಯದಲ್ಲಿರುವ 60 ಸರ್ಕಾರಿ ಸ್ವಾಮ್ಯದ ಸಾರ್ವಜನಿಕ ಉದ್ದಿಮೆಗಳ ಕಾರ್ಯನಿರ್ವಹಣೆ, ಅಭಿವೃದ್ಧಿ ಮತ್ತು ಪ್ರಗತಿ ಪರಿಶೀಲನೆಯನ್ನು ಆಗಿಂದಾಗ್ಗೆ ಪರಿಶೀಲನೆ ಮಾಡುತ್ತಿದೆ. ಸಾರ್ವಜನಿಕ ಉದ್ದಿಮೆಗಳು ಲಾಭಾಂಶ ಗಳಿಸುವುದರ ಮೂಲಕ ಕಾಲಕಾಲಕ್ಕೆ ಪ್ರಗತಿ ಸಾಧಿಸಲು ಉತ್ತೇಜನ ನೀಡುತ್ತಿದೆ. ಪ್ರತಿವರ್ಷ ಕೆಲವು ಆಯ್ದ ಸಾರ್ವಜನಿಕ ಉದ್ದಿಮೆಗಳ ಅಧ್ಯಯನ ಮತ್ತು ಮೌಲ್ಯಮಾಪನವನ್ನು ಕೈಗೊಳ್ಳಲಾಗುತ್ತಿದೆ. 2022-23ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲಾಗುವ ಅನುದಾನದಲ್ಲಿ, ಸೂಕ್ತ ಸಾರ್ವಜನಿಕ ಉದ್ದಿಮೆಗಳನ್ನು ಗುರುತಿಸಿ, ಮೌಲ್ಯಮಾಪನ ಕಾರ್ಯವನ್ನು ಜರುಗಿಸಲಾಗುವುದು.

**ಸಾರ್ವಜನಿಕ ಉದ್ದಿಮೆಗಳ ವ್ಯಾಪ್ತಿಯಲ್ಲಿ ಬರುವ 60 ಸಾರ್ವಜನಿಕ ಉದ್ದಿಮೆಗಳ ಕುರಿತು ಮಾಹಿತಿ**

**ಲಾಭದಲ್ಲಿರುವ ಸಾರ್ವಜನಿಕ ಉದ್ದಿಮೆಗಳು:**

| ಕ್ರ.ಸಂ. | ಸಾರ್ವಜನಿಕ ಉದ್ದಿಮೆ |
|---|---|
| 1 | ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೊರೇಷನ್ ಲಿಮಿಟೆಡ್ ನಿಯಮಿತ |
| 2 | ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ |
| 3 | ಕರ್ನಾಟಕ ಸಾಬೂನು ಮತ್ತು ಮಾರ್ಜಕ |
| 4 | ಮೈಸೂರ್ ಪೇಯಿಂಟ್ಸ್ & ವಾರ್ನಿಷ್ ಲಿಮಿಟೆಡ್ |
| 5 | ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತ |
| 6 | ದಿ ಮೈಸೂರ್ ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಲಿಮಿಟೆಡ್ |
| 7 | ಎನ್ ಜಿಇಎಫ್ (ಹುಬ್ಬಳ್ಳಿ) ನಿಯಮಿತ |
| 8 | ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ |
| 9 | ಮಾರ್ಕೆಟಿಂಗ್ ಕನ್ಸಲ್ಟೆಂಟ್ಸ್ ಅಂಡ್ ಏಜೆನ್ಸೀಸ್ |
| 10 | ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಲಿಮಿಟೆಡ್ |
| 11 | ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ |
| 12 | ಕರ್ನಾಟಕ ವಿದ್ಯುತ್ ನಿಗಮ ನಿಯಮಿತ |
| 13 | ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ |
| 14 | ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ |
| 15 | ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ |
| 16 | ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ |
| 17 | ಡಿ. ದೇವರಾಜ ಅರಸ್ ಟ್ರಕ್ ಟರ್ಮಿನಲ್ಸ್ ಲಿಮಿಟೆಡ್ |
| 18 | ಕರ್ನಾಟಕ  ರಾಜ್ಯ ಬೀಜ ನಿಗಮ ನಿಯಮಿತ |
| 19 | ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿಯಮಿತ |
| 20 | ಕರ್ನಾಟಕ ರಾಜ್ಯ ದ್ವಿದಳ ಧಾನ್ಯಗಳ ಅಭಿವೃದ್ಧಿ ಮಂಡಳಿ ನಿಯಮಿತ |
| 21 | ಕಾವೇರಿ ನೀರಾವರಿ ನಿಗಮ ನಿಯಮಿತ |
| 22 | ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ |
| 23 | ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತ |
| 24 | ಕರ್ನಾಟಕ ಗೇರು ಅಭಿವೃದ್ಧಿ ನಿಗಮ ನಿಯಮಿತ |
| 25 | ಅರಣ್ಯ ವಸತಿ ಮತ್ತು ವಿಹಾರಧಾಮಗಳ ಸಂಸ್ಥೆ |
| 26 | ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ |
| 27 | ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ |
| 28 | ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ |
| 29 | ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ |
| 30 | ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತ |
| 31 | ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತ |
| 32 | ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ |
| 33 | ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ |
| 34 | ಡಾ.ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ(ಲಿಡ್ಕರ್) |

**ನಷ್ಟದಲ್ಲಿರುವ ಸಾರ್ವಜನಿಕ ಉದ್ದಿಮೆಗಳು:**

| ಕ್ರ.ಸಂ. | ಸಾರ್ವಜನಿಕ ಉದ್ದಿಮೆ |
|---|---|
| 1 | ಮೈಸೂರು ಕಾಗದ ಕಾರ್ಖಾನೆ ನಿಯಮಿತ |
| 2 | ಮೈಸೂರು ಸಕ್ಕರೆ ಕಂಪನಿ ನಿಯಮಿತ |
| 3 | ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ |
| 4 | ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ |
| 5 | ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ |
| 6 | ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತ |
| 7 | ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ |
| 8 | ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ |
| 9 | ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ |
| 10 | ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ |
| 11 | ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ |
| 12 | ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ |
| 13 | ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮ ನಿಯಮಿತ |
| 14 | ಕರ್ನಾಟಕ ನೀರಾವರಿ ನಿಗಮ ನಿಯಮಿತ |
| 15 | ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ |
| 16 | ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ |
| 17 | ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ |
| 18 | ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತ |
| 19 | ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ |
| 20 | ಕರ್ನಾಟಕ ರಾಜ್ಯ ಉಗ್ರಾಣ ನಿಗಮ |
| 21 | ಶ್ರೀ ಕಂಠೀರವ ಸ್ಟುಡಿಯೋ ನಿಯಮಿತ |

**ಸೇವಾ ಕ್ಷೇತ್ರದ ಉದ್ದಿಮೆಗಳು**

| ಕ್ರ.ಸಂ. | ಸಾರ್ವಜನಿಕ ಉದ್ದಿಮೆ |
|---|---|
| 1 | ಡಾ. ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ |
| 2 | ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ನಿಗಮ ನಿಯಮಿತ |
| 3 | ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ |
| 4 | ಕರ್ನಾಟಕ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ |
| 5 | ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ |

ನಿರ್ದೇಶಕರು, ಸರ್ಕಾರಿ ಮುದ್ರಣಾಲಯ, ವಿಕಾಸಸೌಧ ಘಟಕ, ಬೆಂಗಳೂರು, ಕಾ.ಸೂ 877 – 325 ಪ್ರತಿಗಳು